(ಸಾಕ್ಷಿಗೆ ಹಿಂದಿ ಭಾಷೆ ಮಾತ್ರ ಬರುವ ಕಾರಣ  ಹಿಂದಿ ಮತ್ತು ಕನ್ನಡ ಭಾಷೆ ಬಲ್ಲ ವಕೀಲರಾದ  ಶ್ರೀಮತಿ FADK ವಕೀಲರನ್ನು ಉಭಯ ಪಕ್ಷಗಾರರ ವಕೀಲರ ಸಮ್ಮತಿಗೆ ಒಳಪಟ್ಟು  ತರ್ಜುಮೆದಾರರನ್ನಾಗಿ ನೇಮಿಸಲಾಯಿತು.)

ತರ್ಜುಮೆದಾರರು ಹಾಗೂ ಸಾಕ್ಷಿಗೆ  ದಿನಾಂಕ 08-07-2026 ರಂದು ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ  2ನೇ ಎದುರುದಾರರ ಪರಃ ಶ್ರೀ.ಎಸ್.ಪಿ.ಕೆ. ವಕೀಲರಿಂದಃ**

ನಾನು ಮಧ್ಯಪ್ರದೇಶದ ಬಾಮುರಿ ಗ್ರಾಮದ ವಾಸಿ.  ನಾನು ಮಧ್ಯಪ್ರದೇಶದಿಂದ ಕೆಲಸ ಮಾಡುವ ಸಲುವಾಗಿ 3 ವರ್ಷದ ಹಿಂದೆ ಪುತ್ತೂರಿಗೆ ಬಂದಿದ್ದೇನೆ.  ರಫೀಕ್ ಎನ್ನುವವರು ನನ್ನನ್ನು ಕೆಲಸ ಮಾಡಲು ಕರೆಸಿದ್ದರು. ಕರ್ನೂರಿನಲ್ಲಿ ಕೂಲಿ ಕೆಲಸ ಮಾಡಲು  ಕರೆಸಿದ್ದರು.  ನಾನು ಅಲ್ಲಿ ಕೆಲಸ ಮಾಡುತ್ತಿದ್ದ ಸಂಬಂಧಿತವಾಗಿ ಲಿಖಿತ ದಾಖಲೆ ಇಲ್ಲ.  ಅಲ್ಲಿ ನನಗೆ  ಕೆಲಸದ ಸಲುವಾಗಿ ಸಂಬಳ ಕೊಡುತ್ತಿದ್ದ ಬಗ್ಗೆ ಲಿಖಿತ ದಾಖಲೆ ಇರುತ್ತದೆ.  ನಾನು  ಸಂಬಳವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡುತ್ತಿರಲಿಲ್ಲ , ನಗದು ರೂಪದಲ್ಲಿ ತೆಗದುಕೊಳ್ಳುತ್ತಿದ್ದೆ.

2. ನಾನು ಒಬ್ಬನೇ  ಕೆಲಸಕ್ಕೆ ಬಂದಿದ್ದೇನೆ. ನಾನು ರಫೀಕ್ ರವರ   ಹತ್ತಿರ ಅಡಿಕೆಗೆ ಸಂಬಂಧಿಸಿದ ಕೂಲಿ ಕೆಲಸ ಮಾಡುತ್ತಿದ್ದೇನೆ.

3. ನಾನು ರಸ್ತೆ ಬದಿಯಲ್ಲಿ ನಿಂತಿದ್ದಾಗ ಆಚೆ ಬದಿಯಿಂದ ಲಾರಿ ವೇಗವಾಗಿ ಬಂದು ಡಿಕ್ಕಿಪಡಿಸಿ ಹೋಗಿರುತ್ತದೆ. ಅದು  ನನ್ನ ಮಾಲೀಕರ ಲಾರಿಯ ಎಂದು ಹೇಳಿದರೆ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕಲ್ಲಿನಕೋರೆಯಲ್ಲಿ ನಾನು ಕೆಲಸ ಮಾಡಿಲ್ಲ.  ಅಪಘಾತ ಆದ ದಿನ ನನಗೆ ಕೆಲಸ ಇಲ್ಲದಿದ್ದ ಕಾರಣ  ನಾನು  ರಸ್ತೆ ಬದಿಯಲ್ಲಿ ನಿಂತಿದ್ದೆನು.  ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ.  ಅಪಘಾತಪಡಿಸಿದ ಲಾರಿಯ ನೋಂದಣಿ ಸಂಖ್ಯೆ ಗೊತ್ತಿಲ್ಲ.  ಲಾರಿಯ  ಚಾಲಕ ಮತ್ತು ಮಾಲೀಕ ಯಾರು ಎಂದು ನೆನಪಿಲ್ಲ.

4. ನಾನು ಸಲ್ಲಿಸಿರುವ  ವಾಕ್ಯ ಪ್ರಮಾಣಪತ್ರದಲ್ಲಿ  ಏನು ಬರೆದಿದೆ ಎಂದು ನೆನಪಿಲ್ಲ.  ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹಾಕಿರುವ  ಹೆಬ್ಬೆಟ್ಟಿನ ರುಜು ನ್ಯಾಯಾಲಯದ ಹೊರಗೆ ಹಾಕಿದ್ದೇನೆ.  ನನಗೆ ಇಂಗ್ಲೀಷ್ ಭಾಷೆ ಬರುವುದಿಲ್ಲ. ನನ್ನ ವಾಕ್ಯ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.  ನನ್ನ ವಾಕ್ಯ ಪ್ರಮಾಣಪತ್ರದಲ್ಲಿ ನಮೂದಿಸಿರುವಂತೆ  ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ.

5. ನಾನು ಕೆಲಸ ಮಾಡುವಾಗ  ಸ್ವತಃ ಬಿದ್ದು ಪೆಟ್ಟು ಮಾಡಿಕೊಂಡಿದ್ದು  ನನ್ನ ಧನಿ  ಹೇಳಿದ ಕಾರಣ ಅಪಘಾತದಲ್ಲಿ ಗಾಯ  ಆಗಿದೆ ಎಂದು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.  ಅಪಘಾತದ ಬಗ್ಗೆ ನನ್ನ ಧನಿ ಹೇಳಿ

ಕೊಟ್ಟ ಹಾಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ನನ್ನ ವಾಕ್ಯ ಪ್ರಮಾಣಪತ್ರದಲ್ಲಿ ತಿಳಿಸಿರುವಂತೆ  ಗಾಯಗಳಿಗೂ ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.  ಪ್ರಮಾಣಪತ್ರದಲ್ಲಿ ನಮೂದಿಸಿರುವಷ್ಟು ದಿನ ಆಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ.

6. ನಾನು ಕರ್ನೂರಿನಿಂದ ಈ ದಿನ ಬಂದಿದ್ದೇನೆ.  ನಾನು  ಈಗಲೂ ಆಚೆ ಈಚೆ ಕೆಲಸ ಮಾಡಿಕೊಂಡು ಜೀವನ ನಿರ್ವಹಿಸುತ್ತಿದ್ದೇನೆ.  ನನಗೆ ಆದ ಗಾಯಗಳಿಗಾಗಿ  6 ಲಕ್ಷಕ್ಕೂ ಹೆಚ್ಚು ವೈದ್ಯಕೀಯ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ಆಸ್ಪತ್ರೆಯ ಖರ್ಚುಗಳನ್ನು ನಾನೇ ಕೊಟ್ಟಿದ್ದೇನೆ.  ಸ್ವಲ್ಪ ನನ್ನ ಹತ್ತಿರ ಇದ್ದ ಹಣ ಹಾಗೂ ನನ್ನ ಸಹೋದರರಿಂದ ಪಡೆದ ಹಣವನ್ನು ಸೇರಿಸಿ ಆಸ್ಪತ್ರೆಯ ಖರ್ಚುಗಳನ್ನುಕೊಟ್ಟಿದ್ದೇನೆ.

7. ಆಸ್ಪತ್ರೆಯಲ್ಲಿ ಬಾಯಿಲಾಲ್ ಎನ್ನುವವರು ನೋಡಿಕೊಂಡಿರುತ್ತಾರೆ.  ಅವರು ಮಧ್ಯಪ್ರದೇಶದವರು , ಅವರು ಬೇರೆ ಕಡೆ ವಾಸಮಾಡುತ್ತಾರೆ.  ಆಸ್ಪತ್ರೆಯಲ್ಲಿ ಇದ್ದಾಗ ನನ್ನ ಹೆಂಡತಿ ಹಾಗೂ ನನ್ನ ಸಹೋದರ ನೋಡಲು ಬಂದಿದ್ದರು.

8. ನನ್ನ ಮಾಲೀಕರು ಹೇಳಿಕೊಟ್ಟಂತೆ ನಾನು ಅಪಘಾತ ಸಂಬಂಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲಲ. ನಿ.ಪಿ.12 ರಲ್ಲಿ  ತೋರಿಸಿರುವಂತೆ ನನಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ.  ನಾನು ಪರಿಹಾರಕ್ಕಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

ತರ್ಜುಮೆದಾರರ ಸಹಿಃ

ಸಾಕ್ಷಿದಾರರ ಸಹಿಃ

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು ದ.ಕ.